

ಡಾಕ್ಟರ್‌ದಾ.... ನಂದಾ?

ಹಾಗಂತ ನಾನೇನೂ ಇಂಥದ್ದು ಮಾಡಲೇಬೇಕೆಂದು ಕಾದು ಕೂತವಳಲ್ಲ ಸುಮಿ! ನಿಜ ಹೇಳ್ಲಾ ಸುಮಿ, ಪ್ರೀತಿಯ ಒರತೆ ಕಾಣದೇಯಿದ್ದರೂ, ಹತ್ತು ವರ್ಷ ದೇಹಕ್ಕಿರಲಿ ಮನಸ್ಸಿಗೂ ಕೂಡ ಯಾರ ನೆರಳು ತಾಕಿಸದ ಹಾಗೆ ಇದ್ದ ನನ್ನ ಹೃದಯದ ದಿಡ್ಡಿ ಬಾಗಿಲನ್ನು ಗುದ್ದಿ ಒಳ ಬಂದವನು 'ಅವನು'. ಜೀವನವೆಂಬ ಮರಳುಗಾಡಲ್ಲಿ ಒಂದು ಹನಿಯ ಪ್ರೀತಿಯೂ ಲಭ್ಯವಿಲ್ಲದಾಗ ಓಯಸಿಸ್‌ನಂತೆ ಬಂದು ಬೊಗಸೆಯಲ್ಲಿ ಮೊಗೆ ಮೊಗೆದು ಪ್ರೀತಿ ನೀಡಿ ನನ್ನ ತೃಷೆಯನ್ನು ನೀಗಿಸಿದವನು. ಇದು ವಾಸ್ತವ ಜಗತ್ತಿನ ಎಲ್ಲಾ ವಾಂಛೆಗಳನ್ನು ಮೀರಿದ ಪ್ರೇಮ. ಪ್ರೀತಿಯ ಉತ್ತುಂಗವನ್ನು ಏರಿ ಅಲ್ಲಿಂದ ಮುಂದೆ ಇನ್ನು ನಿರೂಪಿಸಲು ಏನೂ ಇಲ್ಲ, ಇದಕ್ಕೂ ಹೆಚ್ಚಿನ ಪ್ರೀತಿಯನ್ನು ಹೇಗೆ ತೋರಿಸಲಿ ಎಂದನ್ನಿಸಿದ ಕ್ಷಣ, ತನಗೊಲಿದ ಪ್ರೀತಿಗೆ ತನ್ನದೆಲ್ಲವನ್ನೂ ಧಾರೆ ಎರೆದರೂ ಅದರ ಎತ್ತರ ನಿಲುಕದ ಒಲವಿಗೆ ಪ್ರೇಮದ ಶೃಂಗವನ್ನೇರಿ ಶೃಂಗಾರಕ್ಕಿಳಿದಿದ್ದೇ ವಿನಃ ಅದೇ ಧ್ಯೇಯವಾಗಂತೂ ಖಂಡಿತವಿರಲಿಲ್ಲ. ನನ್ನ ಅವನ ಪ್ರೀತಿ ದೈವಿಕ. ನಂತರ ಸ್ವರ್ಗ ಕಂಡಿದ್ದೂ ನಿಜವೇ. ಆಗಿಯೂ ಇಲ್ಲಿ ಕೇವಲ ದೇಹ ತೃಷೆಯೇ ಎಲ್ಲವೂ ಅಲ್ಲ ಸುಮಿ. ಹಾಗಿದಿದ್ದರೆ, ಹೇಗೂ ನಿನ್ನ ಹೆಸರೇಳಿ ಹೊರಗೆ ಬರೋ ನಾನು, ನನಗೆ ಇವನೊಬ್ಬನನ್ನೇ ಪ್ರತಿಬಾರಿ ಸಿಗೋದರಲ್ಲಿ ಅರ್ಥವೂ ಇರ್ಲಿಲ್ಲ. ಪ್ರಥಮ ಬಾರಿಗೆ ಮನಸ್ಸನ್ನು ಒಬ್ಬ ಆವರಿಸಿದ್ದು, ಅವನಿಗೆ ಮಾತ್ರವೇ ನನ್ನ ನಾ ಅರ್ಪಿಸಿರೋದು. ಪ್ರೀತಿಸಿದವನಿಗೆ ಒಲಿಯೋದು ಅನೈತಿಕವೇನೆ?

ಇನ್ನು ನಾನು ಗಂಡನಿಗೆ ಸುಳ್ಳು ಹೇಳಿ ಅವ್ನನ್ನ ನೋಡಲು ಬರ್ತೀನಿ ಅನ್ನೋದಲ್ವಾ ಕಂಪ್ಲೈಂಟು. ಅಲ್ಲಿಗೂ ಅವ್ರಿಗೆ ಗೊತ್ತಿಲ್ಲ ಅಂತ ಯಾಕೆ ಅನ್ಕೋತಿ?"

ಸರಕ್ಕನೆ ಅವಳ ಕೈ ತೆಗೆದುಕೊಂಡ ಸುಮಿ, 'ಅಂದ್ರೆ..! ನಿನ್ನ ಗಂಡನಿಗೆ ಗೊತ್ತೇನೇ ಅರು?'

ನಿಟ್ಟುಸಿರು ಬಿಡುತ್ತಾ, ಇಂಥದ್ದೆಲ್ಲಾ ತುಂಬಾ ಮುಚ್ಚಿಟ್ಟಷ್ಟೂ ಹರಡೋದು ಜಾಸ್ತಿ ಅಲ್ವಾ!? ಇನ್ನು ನಾನು ಅವರಿಗೆ ಗೊತ್ತಿದೆಯೋ ಇಲ್ಲವೋ ಅಂತ ಕೆದುಕೋಕ್ಕೂ ಹೋಗಿಲ್ಲ. ಕೇಳಿದೆ ಅಂತಾನೆ ಇಟ್ಕೋ, ಆಗ ನಾನೇ ಗೊತ್ತಾದರೂ ಏನೂ ಮಾಡದ ಇವನು, ಇವನೆಂಥ ಗಂಡ ಎಂದು ಆಡಿ ಕೊಳ್ಳಬಹುದು ಅಂತಾನೋ, ತನಗೆ ಗೊತ್ತಾಗಿದೆ ಅನ್ನೋದಕ್ಕಾದರೂ ಅಥವಾ ಗಂಡ ಅನ್ನಿಸಿಕೊಂಡಿದ್ದಕ್ಕಾದರೂ ಅವರು ಕೂಗಾಡಲೇ ಬೇಕು ಅಲ್ವಾ? ನನ್ನ ಸ್ಥಾನದಲ್ಲಿ ಅವರಿದ್ದಿದ್ದರೆ? ನಾನಾದರೂ ಇನ್ನು ಸಂಸಾರ ಅನ್ನುವ ಚೌಕಟ್ಟಿನಲ್ಲೇ ಇದ್ದೀನಿ. ಇವರಲ್ಲಿ ಸಿಗದ ಯಾವುದೋ ಒಂದು ಭಾವವನ್ನ ನಾನು ಅವನೊಡನೆ ಕಂಡುಕೊಂಡಿದ್ದೀನಿ. ಇನ್ಫ್ಯಾಕ್ಟ್ ಹಾಗೆ ನನಗೆ ಅಲ್ಲಿ ಸಮಾಧಾನ ಸಿಗುತ್ತಿರುವುದರಿಂದಲೇ ನಾನು ಇವರನ್ನು ಯಾವುದೇ ಕಾರಣಕ್ಕೂ ಬೇಸರಿಸದೆ ಅವರನಿನ್ನೂ ಚೆನ್ನಾಗಿ ನೋಡಿಕೊಳ್ಳಲು ಸಾಧ್ಯವಾಗಿರೋದು. ಅವರಿಗೂ ಕೂಡ ನನ್ನಿಂದ ಇವಳಿಗೆ ಅನ್ಯಾಯವಾಯಿತು ಅನ್ನೋ ಅಸಮಾಧಾನವಿಲ್ಲ. ಈ ಎಲ್ಲ ಮಾತುಗಳನ್ನು ಪರೋಕ್ಷವಾಗಿ ನಾವಿಬ್ಬರು ಮಾತಾಡಿಕೊಳ್ಳದಿದ್ದರೂ ಈ ಹತ್ತು ವರ್ಷಗಳು ಒಬ್ಬರೊಬ್ಬರ ಒಡನಾಟದಲ್ಲಿ ಕಳೆದಿರೋದರಿಂದ ಇಷ್ಟಾದರೂ ಅರ್ಥವಾಗುತ್ತೆ ಸುಮಿ. ಈಗ ಹೇಳೇ ನನ್ನ ಪ್ರೀತಿ ಅನೈತಿಕವಾ? ಅಥವಾ ಅನೈತಿಕವೇ ಎಂಬುದು ನಿನ್ನ ವಾದವಾದರೆ ಇರಲಿ ಬಿಡು. ಅದರಿಂದ ನನಗೆ ಏನೂ ವ್ಯತ್ಯಾಸವಾಗದು.

ಯಾಕೆ ಅಂತೀಯಾ? ತಿಂಗಳಿಗೊಮ್ಮೆ ಗಂಡಸರನ್ನು ಬದಲಾಯಿಸುತ್ತಾ, ಅವ್ನ ತೆಕ್ಕೆಯಿಂದ ಇವನ ತೆಕ್ಕೆಗೆ ಇವನ ತೆಕ್ಕೆಯಿಂದ ಮತ್ತೊಬ್ಬನ ತೆಕ್ಕೆಗೆ ಬೀಳೋ ಹೆಂಗಸರು ಮಾಡುವ ಭಾನ್ಗಡಿ ಕೆಲ್ಸಕ್ಕೆ ಬೇಕಿದ್ರೆ ನೀನು ಅನೈತಿಕ ಅಂತ ಕರೆದುಕೋ ನಂದೇನೂ ಅಭ್ಯಂತರವಿಲ್ಲ. ಆದರೆ ನನ್ನ ಅವನ ಸಂಬಂಧ ಮಾತ್ರ ಇವೆಲ್ಲವನ್ನೂ ಮೀರಿದ್ದು, ಗೆಳೆತನಕ್ಕೂ ಮೀರಿದ್ದು. ಪ್ರೀತಿನಾ ಎಂದು ಒದ್ದಾಡೋಕ್ಕೆ ನಮ್ಮಲ್ಲಿ ಒಬ್ಬರ ಮೇಲೆ ಮತ್ತೊಬ್ಬರ ಹಿಡಿತವೇ ಇಲ್ಲ, ಬಲವಂತ ಮೊದಲೇ ಇಲ್ಲ. ಪೊಸೆಸ್ಸಿವ್‌ನೆಸ್ ಇಲ್ಲವೇ ಇಲ್ಲ. ಸ್ವಾಧೀನತೆಯೇ ಇಲ್ಲ ಎಂದ ಮೇಲೆ, ಅಭದ್ರತೆ ಮೊದಲೇ ಇಲ್ಲ. ಇದ್ದರೂ ಅದು ಕೇವಲ ಆರಾಧನೆಯೇ ಮೊದಲುಗೊಂಡ ಅದ್ಭುತವಾದ ಭಾವ. ಅಸಲಿಗೆ ಯಾವುದೇ ಹೆಸರ ಅಗತ್ಯವೇ ಇರದ ಬಂಧ ನಮ್ಮ ಸಂಬಂಧ. ಭೂಮಿ ಹಸಿದು, ಬೆವತಾಗ ಮಳೆಗರೆಯುವ ಭೂಮಿಗೂ ಮಳೆಗೂ ಎಂತಹ ಸಂಬಂಧವೇ ಅಥವಾ ಅದೂ ಅನೈತಿಕವಾ? ಯಾವುದೋ ಪರ್ವತ ಶ್ರೇಣಿಯಲ್ಲಿ ಹುಟ್ಟಿ ದುಮ್ಮಿಕ್ಕುವ ನದಿ ಹರಿದು, ಸುರಿದು, ಕುಣಿದು ಕಡಲ ಸೇರುವ ಗಮ್ಯ ಅನೈತಿಕವೇನೇ?

ಪ್ರೇಮ ಕಣ್ಣಿಗೆ ಕಾಣದ ಕೇವಲ ಹೃದಯಕ್ಕೆ ಮಾತ್ರವೇ ಸಿಗುವಂತಹ ಅನುಭೂತಿ. ಅಂತಹ ಅನುಭೂತಿಗೆ ಪಕ್ಕಾಗಿ ಒಲವಾಗೋದು ಅನೈತಿಕವೆಂದರೆ ಭೂಮಿ ಮತ್ತು ಆಕಾಶದ ಸಮಾಗಮಕ್ಕೆ ಸಂಭ್ರಮಿಸೋ ಕಾಮನಬಿಲ್ಲಿಗೇನನ್ನುತ್ತಿ ಸುಮಿ? ಆಕಾಶದಿಂದ ಇಳಿಯೋ ಮಳೆಯಲ್ಲಿ, ಕೇವಲ ಸ್ವಾತಿ ಮುತ್ತಿನ ಹನಿಗೇ ಮಾತ್ರ ತೆರೆದುಕೊಳ್ಳೋ ಕಪ್ಪೆಚಿಪ್ಪಿನಂಥ ಮುಚ್ಚಟ್ಟೆ ಪ್ರೀತಿಗೆ ಯಾವ ಹೆಸರೇ?

'ಇಲ್ಲಿ ಕೇಳು.....ಆ ಸಾವಿರ ಹನಿಗಳಲ್ಲಿ ಒಂದು ಹನಿ ಈಗ ಮುತ್ತಾಗೋ ಸಂಭ್ರಮದಲ್ಲಿದೆ.'

ಸುಮಿಯ ಭುಜ ಹಿಡಿದು, ಅವಳ ಕಣ್ಣಲ್ಲಿ ಕಣ್ಣಿಟ್ಟು ಬಹಳ ಅಕ್ಕರೆ ತುಂಬಿದ ಧ್ವನಿಯಲ್ಲಿ ಪಿಸುಗುಡುತ್ತಾಳೆ ಆರು. ಅವಳ ಕಣ್ಣಲ್ಲಿ ಯಾವುದೋ ಅರಿಯದ ಸಂತಸದ ಹೊಳಪು.

'ಇರ್ಲಿ ಬಿಡೆ ಸುಮಿ. ಯಾವ ಹೆಸರಿನ ಹಂಗಿಲ್ಲದ ನಮ್ಮ ಸಂಬಂಧಕ್ಕೆ ನಿನ್ನ ಹೆಸರಿನ ಹಂಗೇಕೆ? ಹಂಗೆ ಇರದ ಬಂಧಕ್ಕೆ ಕಟ್ಟುಪಾಡೇನು? ಇಷ್ಟು ದಿನ ನಿನ್ನ ಹೆಸರೇಳಿ ಹೊರಗೆ ಬರಲು ಸಹಾಯ ಮಾಡಿದ್ದಕ್ಕೆ ಒಂದು ದೊಡ್ಡ ಥ್ಯಾಂಕ್ಸ್. ನಿನ್ನ ಉಪಕಾರ ಮರೆಯೋಲ್ಲ. ಹುಟ್ಟೋ ಕೂಸು ಹೆಣ್ಣಾದರೆ ನಿನ್ನ ಹೆಸರೇ. ನಾ ನಿನ್ನು ಬರಲೇ?'

ಬೆನ್ನು ತಿರುಗಿಸಿ ಹೊರಟ ಅರುಂಧತಿಯನ್ನ ಸುಮ ಗಮನಿಸುತ್ತಾಳೆ, 'ಹೌದು! ಹೆಜ್ಜೆ ಭಾರವಾಗಿವೆ! ಅದಕ್ಕೆ ಅವಳಲ್ಲಿ ಇಂತಾ ಚೆಲುವು ಮೂಡಿರುವುದು. ನನ್ನ ಅರು ಗರ್ಭಿಣಿ!' ಖುಷಿಯಿಂದ ಓಡಿ ಬಂದು ಹಿಂದಿನಿಂದ ಬಾಚಿ ತಬ್ಬುತ್ತಾಳೆ.




## ಕೈಗುಣ

ಪೂಜೆ ಮಾಡಲು
ಆಯುಧ ಹುಡುಕಬೇಕು
ಗಂಡಸರು
ಆದರೆ
ಹೆಂಗಸರಿಗೆ ಹಾಗಿಲ್ಲ
ಅವರ ಕೈಗೆ ಸಿಕ್ಕಿದ್ದೆಲ್ಲ
ಆಯುಧ!

– ಕಾಸರಗೋಡು ಅಶೋಕ್ ಕುಮಾರ್